**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 1890/2023**

ಸಿ ಡಬ್ಲ್ಯೂ –3

ಪಿ ಡಬ್ಲ್ಯೂ–3

| | | |
|---|---|---|
| **ಸಾಕ್ಷಿದಾರರ ಹೆಸರು** | : | ಮಂಜುನಾಥ |
| **ತಂದೆ/ಗಂಡನ ಹೆಸರು** | : | ನಾಗಪ್ಪ ಲಮಾಣಿ |
| **ವಯಸ್ಸು** | : | 44 ವರ್ಷ |
| **ಉದ್ಯೋಗ** | : | ಗೌಂಡಿ ಕೆಲಸ |
| **ವಾಸ** | : | ಗೋವಿಂದ ಬಡಾವಣೆ, ರಾಣೇಬೆನ್ನೂರು |

**ದಿನಾಂಕಃ 12–09–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ಸಾಕ್ಷಿಗೆ ನಿಪಿ –2 ಸ್ಥಳ ಮಹಜರ್ ನ್ನು ತೋರಿಸಲಾಯಿತು. ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿಯ ಸಹಿಯನ್ನು ನಿ ಪಿ –2 ಸಿ ಎಂದು ಗುರುತಿಸಲಾಯಿತು. ನಿ ಪಿ–2 ಮಹಜರ್ ಗೆ ಸುಮಾರು ಒಂದು ವರ್ಷದ ಹಿಂದೆ ನಾವು ಗೋವಿಂದ ಬಡಾವಣೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದಾಗ ಕಬ್ಬಿಣ ಕಳುವು ಆಗಿದ್ದ ವಿಚಾರವಾಗಿ ಪೋಲಿಸರು ಬಂದಿದ್ದರು ಆಗ ಮಹಜರ್ ಮಾಡಿದಾಗ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ–1 ರವರು ಹಾಜರಿದ್ದರು. ಆ ಸಮಯದಲ್ಲಿ ನಿ ಪಿ –3 ರಂತೆ ಪೋಟೋ ತೆಗೆದಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ ಎಮ್.ಹೆಚ್.ಜಿ. ವಕೀಲರಿಂದಃ**

ನಿ ಪಿ –2 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದೆಯಾ ಎಂದರೆ ನಿಜ. ನಾನು ಪೋಲಿಸರ ಕೋರಿಕೆಯ ಮೇರೆಗೆ ಪೋಟೋ ತೆಗೆಸಿಕೊಂಡಿದ್ದೇನೆ ಎಂದರೆ ನಿಜ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಬಿ.ಸಿದ್ದರಾಜು)

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.